**ಒ.ಎಸ್.ನಂಬ್ರಃ 75/2022** **ಪಿ.ಡಬ್ಲ್ಯೂ:2**

ದಿನಾಂಕಃ 30-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್. ಎಚ್. ರವರಿಂದ

ದಾವಾ ಸ್ವತ್ತನ್ನು ನನ್ನ ಅಜ್ಜಯ್ಯ ಅನಂತರವರು ಹಣ ಕೊಟ್ಟು ಕ್ರಯ ಮಾಡಿರುತ್ತಾರೆ, ಆದರೆ ದಾಖಲೆಯನ್ನು ನನ್ನ ತಂದೆ ಗೋಪಾಲರವರ ಹೆಸರಿಗೆ ನೋಂದಣಿ ಮಾಡಿಸಿರುತ್ತಾರೆ. ಗೇಣಿಯನ್ನು ನನ್ನ ಅಜ್ಜ ತೆಗೆದುಕೊಂಡಿರುತ್ತಾರೆ. ಮೂಲ ಕ್ರಯ ಪತ್ರ ನಮ್ಮ ಬಳಿ ಇದೆ. ಕ್ರಯ ಪತ್ರದಲ್ಲಿ ನನ್ನ ಅಜ್ಜರವರು ಹಣ ಕೊಟ್ಟು ಕ್ರಯ ಮಾಡಿ ನನ್ನ ತಂದೆ ಹೆಸರಿಗೆ ದಾಖಲೆ ನೋಂದಣಿ ಮಾಡಿಸಿರುವುದಾಗಿ ಬರೆದಿಲ್ಲ. ಕ್ರಯ ಪತ್ರದಲ್ಲಿ ಈಗಾಗಲೇ ಗೇಣಿ ಇದ್ದು, ಅದೇ ಸ್ವತ್ತನ್ನು ಖರೀದಿ ಮಾಡುತ್ತಿರುವುದಾಗಿ ಬರೆದಿಲ್ಲ. ವೆಂಕಟಾಚಲಚಾತ್ರ ರವರ ಹೆಂಡತಿ ಭಾಗಿರಥಿರವರಿಂದ ಗೇಣಿಗೆ ಪಡೆದಿರುತ್ತಾರೆ. ಸದರಿ ಭಾಗಿರಥಿಯವರನ್ನು ನಾನು ನೋಡಿರುತ್ತೇನೆ. ಭಾಗಿರಥಿಯವರಿಗೆ 5-6 ಜನ ಮಕ್ಕಳಿರಬಹುದು.

ಈ ದಾವೆಯಲ್ಲಿ ನನ್ನ ಚಿಕ್ಕಪ್ಪ ಅವರ ಮಕ್ಕಳನ್ನು ಸೇರಿಸಿರುವುದಿಲ್ಲ. ಭಾಗಿರಥಿಯವರ ಮಗ ಪ್ರತಿವಾದಿಯ ಮೇಲೆ ಮಾತ್ರ ಈ ದಾವೆಯನ್ನು ಹೂಡಿರುತ್ತಾರೆ. ಕ್ರಯ ಪತ್ರದಲ್ಲಿ ವೆಂಕಟಾಚಲಚಾತ್ರ ಮತ್ತು ಶೇಷಗಿರಿರವರು ಸಾಕ್ಷಿದಾರರಾಗಿರುತ್ತಾರೆ. ಎಷ್ಟು ಹಣಕ್ಕೆ ಕ್ರಯ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮೂಲ ಕ್ರಯ ಪತ್ರವನ್ನು ಹಾಜರು ಪಡಿಸಬಹುದು. ನನ್ನ ಅಜ್ಜಯ್ಯ ಖರೀದಿ ಮಾಡುವ ಸಮಯದಲ್ಲಿ ಕೈ ಬರಹದ ಪಹಣಿ ಜಾರಿಯಲ್ಲಿತ್ತು ಎಂದರೆ ಸರಿ. ನನ್ನ ತಂದೆಯವರು ಕ್ರಯ ಪತ್ರದ ಮೇರೆಗೆ ತಮ್ಮ ಹೆಸರಿಗೆ ಖಾತೆ ಮಾಡಲು ಅರ್ಜಿ ಸಲ್ಲಿಸಿರುವುದಿಲ್ಲ.

ಕ್ರಯ ಪತ್ರ ಆದ 1 ವರ್ಷದಲ್ಲಿ ನನ್ನ ಚಿಕ್ಕಪ್ಪರವರಿಗೆ ವ್ಯವಸ್ಥಾ ಪತ್ರವನ್ನು ಮಾಡಿಕೊಡಲಾಗಿರುತ್ತದೆ. ಸದರಿ ವ್ಯವಸ್ಥಾ ಪತ್ರದ ಮೂಲ ದಾಖಲೆ ನಮ್ಮ ಬಳಿ ಇದೆ, ಅದನ್ನು ನ್ಯಾಯಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಕ್ರಯ ಪತ್ರ ಮತ್ತು ವ್ಯವಸ್ಥಾ ಪತ್ರ ಆಗುವ ಸಮಯದಲ್ಲಿ ನಾನು ಇರಲಿಲ್ಲ, ಅದನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಕ್ರಯ ಪತ್ರ ಆಗಿ ವ್ಯವಸ್ಥಾ ಪತ್ರ ಆಗುವ ಸಮಯದಲ್ಲಿ ದಾವಾ ಸ್ವತ್ತು ಭಾಗಿರಥಿಯವರ ಹೆಸರಿನಲ್ಲಿತ್ತು. ನನ್ನ ಚಿಕ್ಕಪ್ಪ ಪ್ರಥಮವಾಗಿ 2012 ರಲ್ಲಿ ಖಾತಾ ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಖಾತಾ ಬದಲಾವಣೆಗಾಗಿ ಸಲ್ಲಿಸಿದ ಅರ್ಜಿಯನ್ನು ಎ.ಸಿ. ರವರು ತಿರಸ್ಕರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎ.ಸಿ. ರವರು ತಿರಸ್ಕರಿಸಿದ್ದರಿಂದ ಈ ನ್ಯಾಯಲಯದಲ್ಲಿ ದಾವೆ ಹೂಡಿದ್ದಾರೆಂದರೆ ನನಗೆ ಗೊತ್ತಿಲ್ಲ.

ನಾನು ಕೋಟೇಶ್ವರದ ಕೊಳನಕಟ್ಟೆಯಲ್ಲಿ ಕೃಷಿ ಕೆಲಸ ಮಾಡಿಕೊಂಡಿರುತ್ತೇನೆ. ದಾವಾ ಸ್ವತ್ತಿಗೆ ವಾರ್ಷಿಕ ಕಂದಾಯ ಯಾರು ಕಟ್ಟುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ನಾರಾಯಣ, ಪಶ್ಚಿಮಕ್ಕೆ ಬಾಬು ಮೊಗವೀರ, ದಕ್ಷಿಣಕ್ಕೆ ಬಾಬು ಮೊಗವೀರ ಮತ್ತು ಉತ್ತರಕ್ಕೆ ಪ್ರಭಾಕರ, ಸವಿತಾ, ರಾಧ ಗಾಣಿಗರವರ ನಿವೇಶನ ಇದೆ. ನಾನು ಹೇಳುವ ಚೆಕ್ಕುಬಂದಿಯಲ್ಲಿ ದಾವಾ ಆಸ್ತಿ ಬರುವುದಿಲ್ಲ ಎಂದರೆ ಸರಿಯಲ್ಲ. ಚಾಲಾಗೇಣಿ ಆಸ್ತಿಗೆ ಡಿಕ್ಲರೇಶನ್ ಕೊಟ್ಟಿರುವುದಿಲ್ಲ, ಕ್ರಯ ಮಾಡಿರುತ್ತೇವೆ. ದಿನಾಂಕ 27-08-1974 ರಲ್ಲಿ ಖರೀದಿ ಮಾಡಿರುತ್ತಾರೆ. ಡಿಕ್ಲರೇಶನ್ ಖಾಯಿದೆ ಬಂದ 5 ತಿಂಗಳ ನಂತರ ಖರೀದಿ ಮಾಡಲಾಗಿದೆ ಎಂದರೆ ಸರಿ.

ದಾವಾ ಸ್ವತ್ತು ಭಾಗಿರಥಿಯವರದ್ದಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಾವಿತ್ರಿರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸಾವಿತ್ರಮ್ಮರವರು ದಿನಾಂಕ 01-08-2012 ರಲ್ಲಿ ಮಾಡಿದ ವಿಲುನಾಮೆಯ ಬಗ್ಗೆ ತಿಳಿದುಕೊಂಡಿರುತ್ತೇನೆ. ವಿಲುನಾಮೆಯ ಮೇರೆಗೆ ದಾವಾ ಆಸ್ತಿ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ದಿನಾಂಕ 18-06-2013 ರಲ್ಲಿ ಸಾವಿತ್ರಮ್ಮರವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಸಾವಿತ್ರಮ್ಮ ಮರಣ ನಂತರ ವಿಲುನಾಮೆಯ ಮೇರೆಗೆ ಅವರ ಮಗ ಪ್ರತಿವಾದಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ದಾವಾ ಸ್ವತ್ತು ಮೂಲ ಮಾಲೀಕರಿಂದ ಖರೀದಿ ಮಾಡಿಲ್ಲ, ನಾನು ಹೇಳಿದ ಕ್ರಯ ಪತ್ರ ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ, ಆ ಕಾರಣ ನನ್ನ ತಂದೆಗೆ ಯಾವುದೇ ಹಕ್ಕು ಪ್ರಾಪ್ತಿಯಾಗಿಲ್ಲ ಎಂದರೆ ಸರಿಯಲ್ಲ.

ವಾದಿ ನನ್ನ ಚಿಕ್ಕಪ್ಪ ಆಗಿರುವುದರಿಂದ ಅವರಿಗೆ ಪೂರಕವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ರ ದಾಖಲೆಗಳು ಕಲ್ಪಿತ ದಾಖಲೆಗಳು ಎಂದರೆ ಸರಿಯಲ್ಲ. ಕಾಲ ವಿಳಂಬವಾದ ದಾವೆಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**